ಸಿಸಿ ನಂಃ **1306/2024**
ಪಿ.ಡಬ್ಲ್ಯೂಃ **2**

ದಿನಾಂಕ **12-02-2026** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಆರ್.ಕೆ ವಕೀಲರಿಂದಃ</u>

ನಾನು, ದೂರುದಾರ ಹಾಗೂ ಗುರುನಾಥರೆಡ್ಡಿ ಎಂಬಾತ ದೂರುದಾರ ನಡೆಸುವ ಪೈನಾನ್ಸ್ ಸಂಸ್ಥೆಯಲ್ಲಿ ಪಾಲುದಾರರಾಗಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-7ರ ಕರಾರು ಪತ್ರವನ್ನು ಆರೋಪಿ ದೂರುದಾರರಿಗೆ ಬರೆದುಕೊಟ್ಟಿದ್ದಾರೆ. ಸದರಿ ಕರಾರು ಪತ್ರದಲ್ಲಿ ಬರೆದಿರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಆರೋಪಿ ದೂರುದಾರರಿಂದ ರೂ.2 ಲಕ್ಷ ಕೈಗಡ ಸಾಲ ಪಡೆದುಕೊಂಡಿದ್ದರು. ಸಾಲವನ್ನು ಕರಾರು ಪತ್ರ ಬರೆಯುವಾಗ ನಿಮ್ಮ ಎದುರಿಗೆ ಪಡೆದುಕೊಂಡಿದ್ದಾರೆಯೇ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆರೋಪಿ ದೂರುದಾರರಿಂದ ಕೈಗಡ ಸಾಲ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿ ದೂರುದಾರರ ಪೈನಾನ್ಸಿನಿಂದ ಸಾಲ ಪಡೆದುಕೊಂಡಿದ್ದರು ಹಾಗೂ ಅದನ್ನು ಪ್ರತೀ ತಿಂಗಳು ರೂ.2 ಸಾವಿರದಂತೆ ಕಂತುಗಳಲ್ಲಿ ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪೈನಾನ್ಸಿನಿಂದ ಸಾಲ ನೀಡುವಾಗ ದೂರುದಾರ ಪಡೆದುಕೊಂಡಿದ್ದ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡು ಈ ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಈ ಪ್ರಕರಣದ ಹಣದ ವ್ಯವಹಾರ ನಡೆಯುವಾಗ ಫ್ರಾಸಃ3 ಜಿಯಾವುದ್ದೀನ್ ರವರೂ ಸಹ ಹಾಜರಿದ್ದರು. ನಿಪಿ-7ರ ಕರಾರು ಪತ್ರವನ್ನು ಯಾದಗಿರಿಯ ಹಳೆಯ ನ್ಯಾಯಾಲಯದ ಆವರಣದಲ್ಲಿ ಬರೆದಿದ್ದರು. ಮಃ 03.00 ರಿಂದ 3.45 ಗಂಟೆ ಸಮಯದಲ್ಲಿ ಸದರಿ ಕರಾರು ಪತ್ರವನ್ನು ಬರೆದಿರುತ್ತಾರೆ. ಕರಾರು ಪತ್ರವನ್ನು ಬೆರಳಚ್ಚು ಮಾಡಿದ ಬೆರಳಚ್ಚುಗಾರನ ಹೆಸರು ನನಗೆ ಗೊತ್ತಿಲ್ಲ. ಕರಾರು ಪತ್ರವನ್ನು ಬೆರಳಚ್ಚು ಮಾಡಿಸಿದ ನಂತರ ವಕೀಲರಿಂದ ನೋಟರಿ ಮಾಡಿಸುವ ಸಮಯದಲ್ಲಿ ದೂರುದಾರ ಆರೋಪಿಗೆ ಕೈಗಡ ಸಾಲದ ಹಣವನ್ನು ಪಾವತಿ ಮಾಡಿದ್ದರು. ಆರೋಪಿ ಕೈಗಡ ಸಾಲ ಪಡೆದುಕೊಳ್ಳದಿದ್ದರೂ ನಾನು ದೂರುದಾರರ ಪೈನಾನ್ಸ್ ಸಂಸ್ಥೆಯಲ್ಲಿ ಪಾಲುದಾರ ಆಗಿರುವುದರಿಂದ ಅವರ ಪರವಾಗಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

2. ನಿಪಿ-7ರ ಚಾಪಾ ಕಾಗದವನ್ನು ದೂರುದಾರರು ಖರೀದಿ ಮಾಡಿದ್ದರು. ನ್ಯಾಯಾಲಯದ ಆವರಣದಲ್ಲಿಯೇ ಖರೀದಿ ಮಾಡಿದ್ದರು. ಮದ್ಯಾಹ್ನ ಸುಮಾರು 1.30

ಗಂಟೆಗೆ ಚಾಪಾ ಕಾಗದವನ್ನು ಖರೀದಿ ಮಾಡಿದ್ದರು. ನಾನು ದೂರುದಾರನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ

ಸಿಸಿ ನಂಃ **1306/2024**
ಪಿ.ಡಬ್ಲ್ಯೂಃ **3**

ದಿನಾಂಕ **12-02-2026** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಆರ್.ಕೆ ವಕೀಲರಿಂದಃ</u>

ಕರಾರು ಪತ್ರ ಬರೆಯುವಾಗ ನಾನು ನ್ಯಾಯಾಲಯದ ಆವರಣದಲ್ಲಿ ಇದ್ದೆನು. ಆಗ ನಿಮ್ಮೊಂದಿಗೆ ಬೇರೆ ಯಾರು ಇದ್ದರು ಎಂದರೆ ಸಾಕ್ಷಿ ದೂರುದಾರ ಹಾಗೂ ಪ್ರಾಸಾಃ 2 ಆನಂದ ರವರು ಇದ್ದರು ಎಂದು ನುಡಿಯುತ್ತಾರೆ. ನಿಪಿ-7 ರ ಕರಾರು ಪತ್ರವನ್ನು ದಿಃ 11.07.2019 ರಂದು ಬರೆದಿರುತ್ತಾರೆ. ಸದರಿ ಕರಾರು ಪತ್ರದಲ್ಲಿ ಬರೆದಿರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾನು ಹಾಗೂ ದೂರುದಾರ ಸುಮಾರು ವರ್ಷಗಳಿಂದ ಸ್ನೇಹಿತರಾಗಿರುತ್ತೇವೆ ಎಂದರೆ ಸರಿ. ನನಗೆ ಆರೋಪಿತರ ಪರಿಚಯ ಇಲ್ಲ ಎಂದರೆ ಸರಿಯಲ್ಲ. ದೂರುದಾರ ಆರೋಪಿಯಿಂದ ಕೈಗಡ ಸಾಲ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿ ದೂರುದಾರರ ಫೈನಾನ್ಸಿನಿಂದ ಸಾಲ ಪಡೆದುಕೊಳ್ಳುವಾಗ ಭದ್ರತೆಗಾಗಿ ಚೆಕ್ ನೀಡಿದ್ದರು ಹಾಗೂ ಸದರಿ ಚೆಕ್ಕನ್ನು ದೂರುದಾರ ದುರುಪಯೋಗ ಪಡಿಸಿಕೊಂಡು ಈ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ದೂರುದಾರ ಖಾಲಿ ಚೆಕ್ಕಿನಲ್ಲಿ ತಮಗೆ ಬೇಕಾದ ಮೊತ್ತ ನಮೂದಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ.

2. ಕರಾರು ಪತ್ರವನ್ನು ಯಾದಗಿರಿಯ ಹಳೇ ನ್ಯಾಯಾಲಯದ ಆವರಣದಲ್ಲಿ ಟೈಪ್ ಮಾಡಿಸಿದ್ದೆವು. ಮಃ 1.00 ರಿಂದ 1.30-2.00 ಗಂಟೆ ವರೆಗೆ ಕರಾರು ಪತ್ರವನ್ನು ಟೈಪ್ ಮಾಡಿಸಿದ್ದೆವು. ಕರಾರು ಪತ್ರ ತಯಾರಿಸಲು ಚಾಪಾ ಕಾಗದವನ್ನು ದೂರುದಾರ ಖರೀದಿಸಿದ್ದರು. ನ್ಯಾಯಾಲಯದ ಆವರಣದಲ್ಲಿಯೇ ಖರೀದಿ ಮಾಡಿದ್ದರು. ಮಃ 1.00 ರಿಂದ 1.30 ರ ಸಮಯದಲ್ಲಿ ಖರೀದಿ ಮಾಡಿದ್ದರು. ಕರಾರು ಪತ್ರವನ್ನು ನೋಟರಿಯವರಾದ ದೇವಿಂದ್ರಪ್ಪ ವಕೀಲರ ಹತ್ತಿರ ಟೈಪ್ ಮಾಡಿಸಿದ್ದರು. ದೇವಿಂದ್ರಪ್ಪ ವಕೀಲರ ಹತ್ತಿರ ಕಂಪ್ಯೂಟರ್ ಇರುವುದಿಲ್ಲ, ಅವರು ಕೇವಲ ನೋಟರಿ ಮಾತ್ರ ಮಾಡುತ್ತಾರೆ ಎಂದರೆ ಸರಿಯಲ್ಲ. ಕರಾರು ಪತ್ರ ಬರೆಸಿದ ನಂತರ ದೂರುದಾರ ಆರೋಪಿಗೆ ಸಾಲದ ಹಣವನ್ನು ಪಾವತಿ ಮಾಡಿದ್ದರು. ಸಾಲದ ಹಣ ಪಡೆದುಕೊಂಡ ನಂತರ ಆರೋಪಿ ದೂರುದಾರರಿಗೆ ಭದ್ರತೆಗೆ ಏನನ್ನು ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಪಿ-7 ರ ಕರಾರು ಪತ್ರದಲ್ಲಿನ ಅಂಶಗಳ ಬಗ್ಗೆ ನನಗೆ ಮಾಹಿತಿ

ಇಲ್ಲದಿದ್ದರೂ ದೂರುದಾರರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ